1814(2838) ಶ್ರೀ ಪಾಟೀಲ್ ಡಿ.ಆರ್. (ಗದಗ) : ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ನೂಲಿನ ಗಿರಣಿಗಳು ಎಷ್ಟು;

ಆ) ಅವುಗಳಲ್ಲಿ ಖಾಸಗಿ, ರಂಗದಲ್ಲಿ, ಜಂಟಿ ರಂಗದಲ್ಲಿ ಮತ್ತು ಸಹಕಾರ ರಂಗದಲ್ಲಿ ಎಷ್ಟಿವೆ?

ಇ) ಇವುಗಳಲ್ಲಿ ಎಷ್ಟು ಕಾರ್ಯನಿರತವಾಗಿವೆ? ಎಷ್ಟು ಮುಚ್ಚಿವೆ?

ಈ) ಈ ಜವಳಿ ಗಿರಣಿಗಳಿಗೆ ಸರಬರಾಜು ಮಾಡುತ್ತಿರುವ ವಿದ್ಯುಚ್ಛಕ್ತಿ ದರಗಳು ಏನು ಹಾಗೂ ಇದೇ ವಿದ್ಯುಚ್ಛಕ್ತಿಗೆ 5 ವರ್ಷಗಳ ಹಿಂದೆ ಇದ್ದ ದರಗಳೇನು?

ಶ್ರೀ ಸತೀಶ್. ಎಲ್ ಜಾರಕಿಹೊಳಿ (ಜವಳಿ ರಾಜ್ಯ ಸಚಿವರು):

ಅ) ಈ ಇಲಾಖೆ ಮಾರ್ಚ್ 2003 ರಲ್ಲಿ ಸಂಗ್ರಹಿಸಿರುವ ಮಾಹಿತಿ ಪ್ರಕಾರ ರಾಜ್ಯದಲ್ಲಿ ಒಟ್ಟು 73 ನೂಲಿನ ಗಿರಣಿಗಳು ಇರುತ್ತವೆ.

ಆ) ಖಾಸಗಿ ರಂಗದಲ್ಲಿ 57 ಗಿರಣಿಗಳು ಹಾಗೂ ಸಹಕಾರ ರಂಗದಲ್ಲಿ 16 ಗಿರಣಿಗಳು ಮಾತ್ರ ಇರುತ್ತವೆ.

ಇ) ಇವುಗಳಲ್ಲಿ 48 ಗಿರಣಿಗಳು ಕಾರ್ಯನಿರ್ವಹಿಸುತ್ತಿವೆ. 10 ಗಿರಣಿಗಳು ಕಾರ್ಯಸ್ಥಗಿತಗೊಂಡಿವೆ. ಮತ್ತು 15 ಗಿರಣಿಗಳು ಸಮಾಪನೆಗೊಂಡಿರುತ್ತವೆ.

ಈ) ಸರಾಸರಿ ವಿದ್ಯುಚ್ಛಕ್ತಿ ದರಗಳು 2000ನೇ ಸಾಲಿನಲ್ಲಿ ರೂ.4.20 ಇತ್ತು. ಈಗ ಅದು ಒಂದು ಯೂನಿಟ್‌ಗೆ ರೂ.4.80 ಆಗಿರುತ್ತದೆ.

1842(2840) ಶ್ರೀ ಡಿ.ಆರ್.ಪಾಟೀಲ್ (ಗದಗ್) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಒಂದು ಟನ್ ಕಬ್ಬನ್ನು ಅರೆದಾಗ ಅದರಿಂದ ಉತ್ಪಾದನೆಗೊಂಡ ಎಲ್ಲಾ ವಸ್ತುಗಳಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಸಂದಾಯವಾಗುತ್ತಿರುವ ತೆರಿಗೆ ಎಷ್ಟು;

ಆ) ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಕಬ್ಬು ಅರೆಯುವ ಕಾರ್ಖಾನೆಗಳಲ್ಲಿ ಮಾಡುತ್ತಿರುವ ಸೌಲಭ್ಯಗಳು ಏನು;

ಇ) ಒಂದು ಹೊಸ ಪ್ರತಿ ನಿತ್ಯ 500 ಟನ್ ಕಬ್ಬು ಅರೆಯುವ ಕಬ್ಬಿನ ಕಾರ್ಖಾನೆಯಿಂದ ರೈತರಿಗೆ, ಕಾರ್ಮಿಕರಿಗೆ ಮತ್ತು ಸಮಾಜಕ್ಕೆ ಆಗುವ ಅನುಕೂಲತೆಗಳೇನು;

ಈ) ಈಗ ನಮ್ಮ ರಾಜ್ಯದಲ್ಲಿರುವ ಒಟ್ಟು ಸಕ್ಕರೆ ಕಾರ್ಖಾನೆಗಳೆಷ್ಟು ಇವುಗಳಲ್ಲಿ ಖಾಸಗಿ ರಂಗದಲ್ಲಿ, ಸಹಕಾರ ರಂಗದಲ್ಲಿ ಮತ್ತು ಜಂಟಿ ರಂಗದಲ್ಲಿ ಇರುವವೆಷ್ಟು;

ಉ) ಇವುಗಳ ಅರೆಯುವ ಕಬ್ಬಿನ ಪ್ರಮಾಣವೇನು ಹಾಗೂ ಉತ್ಪಾದಿಸಿದ ಸಕ್ಕರೆ ಪ್ರಮಾಣವೇನು

ಊ) ಕಳೆದ ಮೂರು ವರ್ಷಗಳಲ್ಲಿ ಕಬ್ಬು ಬೆಳೆಗಾರರಿಗೆ ನೀಡಿರುವ ಕಬ್ಬಿನ ದರವೆಷ್ಟು (ಕಾರ್ಖಾನೆವಾರು ಮಾಹಿತಿ ನೀಡಿ)?

ಶ್ರೀ ಅಮರೇಗೌಡ ಎಲ್. ಪಾಟೀಲ್ ಬಯ್ಯಾಪುರ (ಸಕ್ಕರೆ ಸಚಿವರು):

ಅ) ಹಾಲಿ ಚಾಲ್ತಿಯಲ್ಲಿರುವ ತೆರಿಗೆ ದರಗಳ ರೀತ್ಯಾ ಒಂದು ಟನ್ ಕಬ್ಬನ್ನು ಅರೆದಾಗ, ಅದರಿಂದ ಉತ್ಪಾದನೆಗೊಂಡ ಪ್ರತಿ ಕ್ವಿಂಟಾಲ್ ಸಕ್ಕರೆ ಮಾರಾಟದಿಂದ ಕೇಂದ್ರ ಸರ್ಕಾರಕ್ಕೆ ರೂ.85/--ರಂತೆ ಸಂಗ್ರಹವಾಗುತ್ತದೆ ಹಾಗೂ ಒಂದು ಟನ್ ಕಬ್ಬನ್ನು ಅರೆದಾಗ ಅದರಿಂದ ಉತ್ಪಾದನೆಗೊಂಡ ಎಲ್ಲಾ ವಸ್ತುಗಳಿಂದ ರಾಜ್ಯ ಸರ್ಕಾರಕ್ಕೆ ರೂ.269/-- ರಂತೆ ತೆರಿಗೆ ಸಂಗ್ರಹವಾಗುತ್ತದೆ.

ಆ) ರಾಜ್ಯ ಸರ್ಕಾರವು ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೆ ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸುವುದಲ್ಲದೆ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಶೇರುಧನ, ಸಾಲಗಳ ರೂಪದಲ್ಲಿ ಆರ್ಥಿಕ ಸಹಾಯ ಒದಗಿಸುತ್ತದೆ. ಸಕ್ಕರೆ ಕಾರ್ಖಾನೆಗಳಿಗೆ ಖರೀದಿ ತೆರಿಗೆಗಳನ್ನು ಮುಂದೂಡಿ, ಬಡ್ಡಿ ರಹಿತ ಸಾಲವೆಂದು ಪರಿವರ್ತಿಸಲಾಗುತ್ತಿದೆ. ಕೇಂದ್ರ ಸರ್ಕಾರದ ಸಕ್ಕರೆ ಅಭಿವೃದ್ಧಿ ನಿಧಿಯಿಂದ ಸಾಲ ಸಹ ನೀಡಲಾಗುತ್ತಿದೆ.

ಇ) ಪ್ರತಿ ನಿತ್ಯ 500 ಟನ್ ಕಬ್ಬು ಅರೆಯುವ ಕಬ್ಬಿನ ಕಾರ್ಖಾನೆಯಿಂದ ಆಗುವ ಅನುಕೂಲಗಳು ಕೆಳಗಿನಂತಿವೆ:

1. <u>ರೈತರಿಗೆ</u>: ಸಕ್ಕರೆ ಕಾರ್ಖಾನೆಗಳು ಗ್ರಾಮೀಣ ಭಾಗದಲ್ಲಿ ಕೃಷಿ ಉತ್ಪನ್ನ ಆಧಾರಿತ ಕಾರ್ಖಾನೆಯಾಗಿದ್ದು. ರೈತರು ಬೆಳೆದ ಕಬ್ಬಿಗೆ ನಿಗದಿತವಾದ ಮತ್ತು ಲಾಭದಾಯಕವಾದ ಬೆಲೆ ದೊರಕುತ್ತಿದೆ. ಒಂದು ಹಂಗಾಮಿಗೆ 1 ಲಕ್ಷ ಟನ್ ಕಬ್ಬು ನುರಿಸಲ್ಪಟ್ಟರೆ ಒಂದು ಲಕ್ಷ ಕ್ವಿಂಟಾಲ್ ಸಕ್ಕರೆ ಉತ್ಪಾದನೆಯಾಗುತ್ತದೆ. ರೈತರಿಗೆ ಇದರಿಂದ 10 ಕೋಟಿ ರೂ. ಕಬ್ಬು ಬೆಲೆ ಮೂಲಕ ಲಭ್ಯವಾಗುತ್ತದೆ. ಸುಮಾರು 1000 ಗ್ರಾಮೀಣ ರೈತ ಫಲಾನುಭವಿಗಳು ತಮ್ಮ ಕುಟುಂಬ ನಿರ್ವಹಣೆಯನ್ನು ಇದರಿಂದ ಮಾಡುತ್ತಿದ್ದಾರೆ.

2. <u>ಕಾರ್ಮಿಕರು</u>: ಸುಮಾರು 300 ಜನ ಕಾರ್ಮಿಕರಿಗೆ ಕೆಲಸ ದೊರೆಯಲಿದೆ.

3. <u>ಸಮಾಜಕ್ಕೆ</u>: ಗ್ರಾಮೀಣ ರೈತರಿಗೆ ಹಾಗೂ ಕೂಲಿಗಾರರಿಗೆ ಕೆಲಸ ದೊರಕುತ್ತಿದ್ದು ಇದರಿಂದ ಆರ್ಥಿಕ ಪ್ರಯೋಜನ ಪಡೆಯುವುದರಿಂದ ಸಮಾಜಕ್ಕೆ ಸಹಜವಾಗಿ ಅನುಕೂಲವಾಗುತ್ತಿದೆ.

ಈ) ನಮ್ಮ ರಾಜ್ಯದಲ್ಲಿ ಒಟ್ಟು 46 ಸಕ್ಕರೆ ಕಾರ್ಖಾನೆಗಳಿವೆ:

ಖಾಸಗಿ ರಂಗದಲ್ಲಿ	:	22
ಸಹಕಾರಿ ರಂಗದಲ್ಲಿ	:	21
ಜಂಟಿ ರಂಗದಲ್ಲಿ	:	01
ಸರ್ಕಾರಿ ರಂಗದಲ್ಲಿ	:	02
ಒಟ್ಟು	:	46

ಉ) ಈ ಎಲ್ಲಾ ಸಕ್ಕರೆ ಕಾರ್ಖಾನೆಗಳಿಂದ ಸಾಮಾನ್ಯವಾಗಿ ಒಂದು ಹಂಗಾಮಿನಲ್ಲಿ ಸುಮಾರು150 ಲಕ್ಷ ಟನ್ ಕಬ್ಬನ್ನು ನುರಿಸಿ ಸುಮಾರು 15 ಲಕ್ಷ ಟನ್ ಸಕ್ಕರೆ ಉತ್ಪಾದಿಸಲಾಗುತ್ತಿದೆ.

ಊ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

CANE PRICE PAID BY THE SUGAR FACTORIES IN KARNATAKA

SL No	FACTORY	2000-01			2001-02			2002-03			2003-04		
		CANE Price Fixed	H&T charges	Total	Cane Price Fixed	H&T charges	Total	Cane Price Fixed	H&T charges	Total	Cane Price Fixed	H&T charges	Total
A. NORTH WEST KARNATAKA:													
1	GEM			0			0	720	179	899	850	180.51	1,031
2	GODAVARI	800	129	929	846	155	1,001	750	151	901	860	159	1,019
3	PRABULINGESHWAR			0	750	175	925	700	180	880	800	271	1,019
4	RENUKA SUGARS	775	225	1,000	750	231	981	700	238	938	800	106	906
5	UGAR	905	143	1,048	875	150	1,025	775	166	941	860	170	1,030
6	VENKATESHWARA			0	810	153	963	750	166	916	810		810
7	BHAGYALAXMI	700	111	811	800	125	925	625	111	736			0
8	DOODHAGANGA	830	176	1,006	825	156	981	776	185	961	875	185	1,060
9	GHATAPRABHA	760	167	927	810	185	995	725	114	839			0
10	RALASIDHANATH	760	167	927	810	185	995	760	141	901	800	173	973
11	HIRANYAKESHI	811	128	939	836	146	982	700	149	849	875	145	1,020
12	KARNATAKA	763		763	750		750	600	224	824	825		825
13	KRISHNA							700	150	850	800	163	963
14	MALAPRABHA	800	74	874	825	74	899	600	110	710	700	110	810
15	NANDI	905	132	1,037	700	138	838	650	131	781	855	154	1,009
16	RAIBAG	784	207	991	NF		0			0			0
17	RYATARA SSK	842	139	981	925	159	984	750	165	915	852	157	1,009

18 BANNARI AMMAN	845		845	850		850	873		873	873		873
19 CHAMUN-DESHWARI			0	850		850	850		850	850		850
20 DAVANG-ERE	885		885	885		885	880		880	934		934
21 GANGAV-TI	605	225	830	610	257	867	NS		0			0
22 ICL SUGARS			0	825		825	825		825	810	15	825
23 INDIA SUGARS	805		805	820		820	830		830	840		840
22 MAHADE-SHWARA			0			0			0			0
24 MYSORE PAPER	880		880	880		880	900		900	930		930
25 MYSUGAR	880		880	880		880	900		900	1000		1000
26 SHAMAN-UR	875		875	NF		0	875		875	875		875
27 SIRUGU-PPA(D)	770		770			0	NS		0			0
28 SIRUGU-PPA(G)			0			0	NS		0			0
29 ALLAND	525	250	775	710	250	960	850		850			0
30 BHADRA	740	135	875	773	101	874	800	75	875	860		860
31 BIDAR			0			0	600	167	767	650	178	828
32 HEMAVA-THY			0			0	825		825	800		800
33 NARANJA							650	181	831	650	206	856
34 PANDAVA-PURA	570	250	820	575	250	825	800		800	675	228	903
35 SRI SREE RAM	775		775	625	100	775	800		800	800		800

36 VANIVIL-ASA	835	125	960			0	NS		0			0	
38 DAK KANNADA			0			0	736		736			0	
39 Jamakhandi sugars	-	-	-	-	-	-	-	-	969.60	-	-	1027.50	
40 Athani Farmers	-	-	-	-	-	-	-	-	949.20	-	-	1027.50	
41 Nirani Sugars	-	-	-		-	-	-	-	-	-	-	849.00	
42 Sundari Sugars	-	-	-	-	-	-	-	-	-	-	-	Not Working	
43 Dyanayogi Sugars	-	-	-	-	-	-	-	-	-	-	-	New	
44 Mahatma Gandhi SSK	-	-	-	-	-	-	-	-	-	-	-	860	
45 Devi Sugars	-	-	-	-	-	-	-	-	-	-	-	Not Working	
46 SCM Sugars	-	-	-	-	-	-	-	-	-	-	-	New	

1843(2319) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿಗೆ ಸೇರಿದ ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ನವೋದಯ ಮತ್ತು ಮೊರಾರ್ಜಿ ವಸತಿ ಶಾಲೆಗಳಲ್ಲಿ ಸಿಬ್ಬಂದಿ ವರ್ಗ ಮತ್ತು ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಮುಂಡಾಜಿ ನವೋದಯ ಮಾದರಿ ಶಾಲೆಯಲ್ಲಿ ಮಂಜೂರಾದ ಒಟ್ಟು ಹುದ್ದೆಗಳು ಎಷ್ಟು?

ಈ) ಖಾಲಿ ಹುದ್ದೆಗಳನ್ನು ಯಾವಾಗ ತುಂಬಲಾಗುವುದು?

ಉ) ಸದರಿ ವಸತಿ ಶಾಲೆಗಳಲ್ಲಿನ ಇಂತಹ ಕೊರತೆಗಳಿಂದಾಗಿ ವಿದ್ಯಾರ್ಥಿಗಳ ಮೇಲೆ ನೇರ ಪರಿಣಾಮ ಬೀರುತ್ತಿರುವ ಬಗ್ಗೆ ಸರ್ಕಾರದ ಕ್ರಮಗಳೇನು?

ಊ) ವಸತಿ ಶಾಲೆಗಳ ಸುವ್ಯವಸ್ಥೆ ಬಗ್ಗೆ ಸರ್ಕಾರ ಕಟ್ಟುನಿಟ್ಟಿನ ಸಕಾಲಿಕ ಕ್ರಮಗಳನ್ನು ಜರುಗಿಸುವುದೇ?